ಮಂಗಳೂರು ಮಹಾನಗರ ಪಾಲಿಕೆಯ ಕಾವೂರಿನ ಮುಲ್ಲಕಾಡಿನ ಡ್ರೈನೇಟ್ ನೀರಿನ್ನು ಸಮುದ್ರಕ್ಕೆ ಬಿಡುತ್ತಿರುವುದು.

79(202) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯ ಕಾವೂರಿನ ಮುಲ್ಲಕಾಡಿನ ಡ್ರೈನೇಜ್ ಸ್ಥಾವರದಿಂದ ನೀರನ್ನು ತೆರೆದ ಕಾಲುವೆಯ ವ್ಯವಸ್ಥೆಯ ಮೂಲಕ ಸಮುದ್ರಕ್ಕೆ ಬಿಡುತ್ತಿರುವುದರಿಂದ ಜನರ ಆರೋಗ್ಯಕ್ಕೆ ಹಾನಿ ಎಂಬುದನ್ನು ಸರ್ಕಾರವು ಗಮನಿಸಿದೆಯೇ?

ಆ) ಆರೋಗ್ಯಕ್ಕೆ ಹಾನಿಕಾರಕವಾಗಿರುವ ಈ ವ್ಯವಸ್ಥೆಯನ್ನು ಬದಲಿಸಿ ಕೊಳವೆ ಮೂಲಕ ಸಮುದ್ರಕ್ಕೆ ನೀರನ್ನು ಬಿಡುವ ವ್ಯವಸ್ಥೆಯನ್ನು ಶೀಘ್ರವಾಗಿ ಸರ್ಕಾರವು ಮಾಡುವುದೇ?

ಇ) ಸ್ಥಳೀಯ ನಾಗರೀಕರು ಈ ಕುರಿತು ಎಷ್ಟು ಮನವಿಗಳನ್ನು ಸಲ್ಲಿಸಿದ್ದಾರೆ?

ಈ) ಈ ಸಮಸ್ಯೆಯ ಪರಿಹಾರಕ್ಕಾಗಿ ಯಾವ ಯೋಜನೆಯು ಸರ್ಕಾರದ ಮುಂದೆ ಇದೆ? ಯಾವಾಗ ಅದನ್ನು ವ್ಯವಸ್ಥೆಗೊಳಿಸಲಾಗುವುದು?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) ಹೌದು

ಆ) ಈ ಸಮಸ್ಯೆಯನ್ನು ಪರಿಹರಿಸಲು ಏಷ್ಯ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ 35 ಕೋಟಿ ರೂಗಳ ಯೋಜನೆಯನ್ನು ತಯಾರಿಸಲಾಗುತ್ತಿದೆ.

ಇ) 3 ಮನವಿಗಳು

ಈ) "ಆ" ನಲ್ಲಿ ಉತ್ತರಿಸಿರುವಂತೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಸ್‌ಸಿ : ಎಸ್‌ಟಿ ಜನಾಂಗದವರಿಗೆ ವಸತಿ ಶಾಲೆ.

81(220) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಸ್‌ಸಿ : ಎಸ್‌ಟಿ ಜನಾಂಗದವರ ಒಟ್ಟು ಸಂಖ್ಯೆ ಎಷ್ಟು? (ಪ್ರತ್ಯೇಕ ವಿವರ ಒದಗಿಸುವುದು)

ಅ) ಇವರ ಪೈಕಿ ವಸತಿ ರಹಿತರ ಸಂಖ್ಯೆ ಎಷ್ಟು?

ಇ) ಇವರಿಗೆ ವಸತಿ ಸೌಲಭ್ಯ ಒದಗಿಸಲು ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳೇನು?

ಈ) ಸುರತ್ಕಲ್ ಕ್ಷೇತ್ರದ ಮಧ್ಯದಲ್ಲಿ ನಡೆಸಲಾಗುತ್ತಿರುವ ಕೊರಗರ ಶಾಲೆಯಲ್ಲಿ ಅಧ್ಯಾಪಕರ ಕೊರತೆ ಇರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇಲಾಖೆಯಿಂದ ತೆಗೆದುಕೊಂಡಿರುವ ಕ್ರಮಗಳೇನು?

ಉ) ಸದರಿ ವಸತಿಶಾಲೆ ನಿರ್ಮಾಣಕ್ಕೆ ಮಂಜೂರಾದ ಹಣವೆಷ್ಟು? ಇಧರ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) 1991ರ ಜನಗಣತಿ ಪ್ರಕರಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರ ಜನಸಂಖ್ಯೆ ವಿವರ ಕೆಳಗಿನಂತಿದೆ.

ಪರಿಶಿಷ್ಟ ಜಾತಿ (ಎಸ್.ಸಿ) - 1,97597

ಪರಿಶಿಷ್ಟ ಪಂಗಡ (ಎಸ್.ಟಿ.) - 61,568

ಆ) 1997-98ನೇ ಸಾಲಿನಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ 4,257 ಪರಿಶಿಷ್ಟ ಜಾತಿ ಕುಟುಂಬಗಳು ಮತ್ತು 1758 ಪರಿಶಿಷ್ಟ ವರ್ಗದ ಕುಟುಂಬಗಳಿಗೆ ವಸತಿ ಸೌಕರ್ಯವಿರುವುದಿಲ್ಲ ಎಂದು ಗುರುತಿಸಿದೆ.

ಇ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನರಿಗೆ ವಸತಿ ಸೌಲಭ್ಯ ಒದಗಿಸುವ ಸಲುವಾಗಿ ಅಂಬೇಡ್ಕರ್ ವಸತಿ ಯೋಜನೆಯನ್ನು ಅನುಷ್ಠನಗೊಳಿಸಲಾಗುತ್ತಿದೆ. ಇದಲ್ಲದೆ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಐ.ಟಿ.ಡಿ.ಪಿ. ಜಿಲ್ಲೆಗಳಲ್ಲಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1993-94ನೇ ಸಾಲಿನಿಂದ ಇದುವರೆಗೆ 6,372 ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಕುಟುಂಬಗಳಿಗೆ ವಸತಿಯನ್ನು ಕಲ್ಪಿಸಲಾಗಿದೆ.

ಈ) ಹೌದು.

ಈ ಕೊರತೆಯನ್ನು ನೀಗಿಸಲು ಗೌರವಧನದ ಆಧಾರದಲ್ಲಿ 97-98 ಮತ್ತು 98-99ನೇ ಸಾಲಿನಲ್ಲಿ ನಿವೃತ್ತ ಶಿಕ್ಷಕರನ್ನು ಮಾಸಿಕ ಗೌರವಧನ ರೂ. 1500-00 ರಂತೆ ನೇಮಕಾತಿ ಮಾಡಲಾಗಿದೆ.

ಉ) ಸದರಿ ಆಶ್ರಮಶಾಲೆಯ ಕಟ್ಟಡ ಕಾಮಗಾರಿಗೆ ರೂ. 28.00 ಲಕ್ಷ ಮತ್ತು ವಸತಿನಿಲಯದ ಕಟ್ಟಡ ಕಾಮಗಾರಿಗೆ ರೂ. 28.00 ಲಕ್ಷಗಳು ಸೇರಿದಂತೆ ಒಟ್ಟು ರೂ. 51.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿ ಕಟ್ಟಡವು ಮುಕ್ತಾಯದ ಹಂತದಲ್ಲಿದೆ. ನೀರು ಮತ್ತು ವಿದ್ಯುತ್ ಕೆಲಸ ಬಾಕಿ ಇರುತ್ತದೆ. ವಸತಿನಿಲಯದ ಕಟ್ಟಡವು ಹಂತದಲ್ಲಿದೆ. ಟೆಂಡರ್ ಕರಾರಿನಂತೆ ನಿಗಧಿತ ಅವಧಿಯಲ್ಲಿ ಭಾವಣೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಪ್ರಾಥಮಿಕ ನೇಕಾರ ಸಹಕಾರ ಸಂಘಗಳಿಗೆ ಹಣ ಬಿಡುಗಡೆ.

82(233) ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) :— ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ನೇಕಾರ ಸಹಕಾರ ಸಂಘಗಳಿಗೆ ಇಲಾಖೆಯ ವತಿಯಿಂದ ಬಿಡುಗಡೆಯಾದ ಧನ ಸಹಾಯದ ಮೊತ್ತ ಎಷ್ಟು?

ಆ) ನೇಕಾರ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡದೆ ಬಾಕಿ ಉಳಿಸಿಕೊಂಡಿರುವ ಎಂ.ಡಿ.ಎ ಬಾಬತ್ತಿನ ಹಣದ ಮೊತ್ತ ಎಷ್ಟು? ಅದನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಜವಳಿ ಸಚಿವರು) :—

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಂಟು ಪ್ರಾಥಮಿಕ ನೇಕಾರ ಸಹಕಾರ ಸಂಘಗಳಿಗೆ ಮಾರುಕಟ್ಟೆ ಅಭಿವೃದ್ಧಿ ಯೋಜನೆಯಡಿ 1994-95ನೇ ಸಾಲಿನಿಂದ 1997-98ನೇ ಸಾಲಿನವರೆಗೆ ರೂ. 93,41,756-00 ಗಳ ಧನ ಸಹಾಯ ಇಲಾಖೆಯಿಂದ ಬಿಡುಗಡೆ ಮಾಡಲಾಗಿದೆ.

ಆ) ಇಲಾಖೆಯಿಂದ ಸದರಿ ಸಹಕಾರ ಸಂಘಗಳಿಗೆ ರೂ. 17,90,998-00 ಎಂಡಿಎ ಬಾಕಿ ಇದ್ದು, ಈ ಪೈಕಿ 1994-95 ಮತ್ತು 1995-96ನೇ ಸಾಲಿನ ಕೇಂದ್ರದ ಸಾಲಿನ ಹಣ ರೂ. 3,36, 024-00 ಬಗ್ಗೆ ಲೆಕ್ಕ ಹೊಂದಾಣಿಕೆಯಾದ ನಂತರ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು. 1997-98ನೇ ಸಾಲಿಗೆ ಸಂಬಂಧಿಸಿದಂತೆ ರೂ. 14,54,974-00 ಗಳನ್ನು ಬಿಡುಗಡೆ ಮಾಡಲು ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ನಂತರ ಸದರಿ ಸಹಕಾರ ಸಂಘಗಳಿಗೆ ಹಣ ಬಿಡುಗಡೆ ಮಾಡಲಾಗುವುದು.